



ವೃದ್ಧ: ವೈದ್ಯರೇ ನನ್ನನ್ನು, ಅಪರೂಪಕ್ಕೆ ಕೆಟ್ಟ ರೋಗವೊಂದು ಬಾಧಿಸುತ್ತಿದೆ. ಏನಾದರೂ ಔಷಧಿ ಕೊಟ್ಟು ಗುಣಪಡಿಸಿರಿ.

ವೈದ್ಯ: ಏನ್ ರೋಗ, ಅದರಿಂದ ಏನಾಗುತ್ತಿದೆ?

ವೃದ್ಧ: ನನ್ನ ಹಣೆ ದಿನದಿನಕ್ಕೂ ಅಗಲವಾಗುತ್ತಿದೆ. ಹೋದ ವರ್ಷಕ್ಕಿಂತ ಈ ವರ್ಷ ವಿಪರೀತ ಅಗಲವಾಗಿಬಿಟ್ಟಿದೆ!

ವೈದ್ಯ: ಅಯ್ಯೋ ಮಾರಾಯ. ಹಣೆ ಅಗಲವಾಗುತ್ತಿಲ್ಲ ಬದಲಾಗಿ ನಿಮ್ಮ ನೆತ್ತಿ ಮೇಲಿನ ಕೂದಲುಗಳು ಉದುರುತ್ತಿವೆ ಅಷ್ಟೇ. ಫೀಸ್ ಕೊಟ್ಟು ಆರಾಮಾಗಿ ಮನೆಗ್ ಹೋಗಿ.

***

ತಾತ: ಮಗು ಇಲ್ಲೇ ಆಟವಾಡಿಕೊಂಡಿರು. ನಾನು ಬೂತಿಗೆ ಹೋಗಿಬರುತ್ತೇನೆ.

ಮೊಮ್ಮಗ: ತಾತಾ ಭೂತ ಅಂತಾ ಅನ್ನುತ್ತಿದ್ದೀರಿ. ಭೂತ ಪಿಶಾಚಿ ದೆವ್ವ ಇವುಗಳೆಲ್ಲ ಅಪಾಯ ಅಂತ ನೀವೇ ಹೇಳಿದ್ದೀರಿ ಭೂತದ ಸಹವಾಸಬೇಡ.

ತಾತಾ: ಆ ಭೂತ ಅಲ್ಲವೋ ನಾನು ಕಾಯಿನ್ ಬೂತಿಗೆ ಹೋಗಿ ಫೋನ್ ಮಾಡಿ ಬರಬೇಕು ಹೆದರಬೇಡ.

***

ತೆನಾಲಿ ರಾಮನ ಎದುರು ಒಮ್ಮೆ ಕಾಳಿಕಾದೇವಿ ಪ್ರತ್ಯಕ್ಷಳಾದಳು. ಅವಳನ್ನು ಕಂಡ ತಕ್ಷಣವೇ ತೆನಾಲಿ ಪಕಪಕ ನಗಲು ಆರಂಭಿಸಿದ. ಯಾಕಪ್ಪ ನನ್ನನ್ನು ನೋಡಿ ಜೋರಾಗಿ ನಗುತ್ತಿದ್ದೀಯಾ ಎಂದಳು ಕಾಳಿಕಾದೇವಿ. ಅದಕ್ಕೆ ತೆನಾಲಿ ಅಲ್ಲಾ ಮಾನವರಿಗೆ ಒಂದು ತಲೆ ಒಂದು ಮೂಗು ಇದೆ. ನೆಗಡಿ ಬಂದರೆ ಒದ್ದಾಡುತ್ತೇವೆ. ಅಂತಹದ್ದರಲ್ಲಿ ನಿನಗೆ 1,000 ತಲೆ ಎರಡು ಕೈಗಳೂ ಇವೆ. ನೆಗಡಿ ಬಂದರೆ ನಿನ್ನ ಗತಿ ಏನು ಎಂದು ಯೋಚಿಸಿದೆ. ನಗು ಬಂತಷ್ಟೇ?

***

ಒಮ್ಮೆ ಕೋರ್ಟಿನಲ್ಲಿ ನ್ಯಾಯಾಧೀಶರು ರಾವಣನನ್ನು ಸಾಕ್ಷಿ ಹೇಳಲು ಕರೆಸಿದರು. ಸೀತೆ ಮೇಲೆ ಕೈಯಿಟ್ಟು ಪ್ರಮಾಣ ಮಾಡು ಎಂದು ರಾವಣನಿಗೆ ನ್ಯಾಯಾಧೀಶರು ಹೇಳಿದರು. ಅದಕ್ಕೆ ರಾವಣ ಅದೊಂದು ಬಿಟ್ಟು ಬೇರೆ ಹೇಳಿ ನಾನು ಈಗಾಗಲೇ ಸೀತೆ ಮೇಲೆ ಕೈ ಇಟ್ಟು ಸುಟ್ಟುಕೊಂಡಿದ್ದೇನೆ.

(ಸಂಗ್ರಹ) ಬಾಣಾವರ ಪಟ್ಟಾಭಿ, ಬೆಂಗಳೂರು

